ಕೊಡಲ್ಪಡುವ ಸರಟಿಫಿಕೇಟಿನಿಂದ ತಿಳಿಯಬಂದಲ್ಲಿ ಈ ಬಗ್ಗೆ ವಿರೋಧವನ್ನು ನಿರ್ದ್ಧಾಂತಪಡಿಸುವವರಿಗೂ ಅದು ಹಾಗೆ ಅಯೋಗ್ಯವೆಂಬುವದಕ್ಕೆ ಅದೇ ತಕ್ಕ ರುಜುವಾತ್ತಾಗಿರತಕ್ಕದ್ದು. ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ರುಜುವಾತ್ತಾಗಿರುವ ಯಾವ ಸ್ಥಳದಿಂದ ತರಲ್ಪಟ್ಟಿತೋ ಅಂಥಾ ಎರೇಟೆಡ್ ವಾಟರ್ಸ್ ತಯಾರಿ ಯಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಸ್ಥಳದ ಯಜಮಾನನು ಅಥವಾ ಕಾರ್ಯ ನಿರ್ವಾಹಕನು ಬಂದು ಅಪರಾಧ ನಡಿಸಿದವನಾಗುವನು. (ತಪ್ಪಿತಸ್ಥನಾಗುವನು).

ಮಂಜಿನಗಡ್ಡಿ ಕಾರ್ಖಾನೆಗಾಗಲಿ ಅಥವಾ ಎರೇಟೆಡ್ ವಾಟರ್ಸ್ ಕಾರ್ಖಾನೆಗಾಗಲಿ ಈ ಉಪನಿಬಂಧನೆ ಮೇರಿಗೆ ಕೊಡಲ್ಪಡುವ ಲೈಸೆನ್ಸಿನ ಯಾವ ಷರತ್ತಿಗಾಗಲಿ ತಪ್ಪಿ ನಡಕೊಂಡಲ್ಲಿ ಅಂಥಾ ಲೈಸೆನ್ಸು ಹೊಂದಿರುವ ಮನುಷ್ಯನು ಮತ್ತು ಲೈಸೆನ್ಸು ಕೊಡಲ್ಪಟ್ಟಿರುವಂಥಾ ಸ್ಥಳದ ಸ್ವಾಧೀನಗಾರನು ಸಹ ತಪ್ಪು ಸ್ಥಾಪನೆಯಿಂದ 20 ರೂಪಾಯಿಗಳಿಗೆ ವಿಾರದ ಒಂದು ಜಲ್ಮಾನೆಗ ಗುರಿಯಾಗುವರು ಮತ್ತು ಅಪಾದನೆ ಆದನಂತರ ಮೇಲ್ಕಂಡ ಷರತ್ತುಗಳಿಗೆ ತಪ್ಪು ನಡಕೊಂಡ ಪ್ರತಿದಿನಕ್ಕೂ 5 ರೂಪಾಯಿ ವರಿವಿಗೂ ಜಲ್ಮಾನೆ ತೆರಲು ಗುರಿಯಾಗುವರು.

ಬಿ. ಕೃಷ್ಣರಾವ್,
ಹೆಲ್ತ್ ಆಫಿಸರ್.

ನೋಟಿಸ್.

ಚನ್ನಪಟ್ಟಣ ತಾಲ್ಲೂಕು ಕಛೇರಿಯಿಂದ.

ತಾರೀಖು 16-18ನೆ ಮಾರ್ಚ 1903.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಾಲ್ಲೂಕು ಮಜಕೂರು ರಿಕಾರ್ಡಿನ ವಿಲೆಯಲ್ಲಿ ಇರುವ ಮೌಜೆವಾರ್ ಡಿಟ್ಟುಂಚಿಟ್ಟು—ಕುಳವಾರು ಚಿಟ್ಟು ಯಾನೆ ಅವ್ವಲ್ ನಂಬರು ದುಯ್ಯಂ ನಂಬರು ವಗೈರೆ ಹಳೆ ಲೆಕ್ಕಗಳನ್ನು ಗವರ್ನಮೆಂಟು 11—3—95ನೆ ಮಕ್ರುಂ 14523-30—R. F. 157-93ನೆ ನಂಬರು ಪ್ರೊಸಿಡಿಂಗ್ಸಿನಲ್ಲಿ ನಮೂದಿರುವ ಮೇರಿಗೆ ಸರ್ವೆ ಆದ 12 ವರುಷಗಳ ಕಾಲ ಕಳೆದು ಇರುವದ್ದರಿಂದ ನಾಶಪಡಿಸುವದಕ್ಕಾಗಿ ಸಾರ್ವೆ ಮಾಡಿಸಿಟ್ಟಿರುತ್ತೆ. ಇವುಗಳಿಗೆ ಸಮ್ಮಂಧಪಟ್ಟ ದಾಖಲೆಗಳು ಅವಶ್ಯಕ ಇರತಕ್ಕವರು ಯಾರಿದ್ದರು ಈ ಇಸ್ತಿಹಾರ್ ಫಾಯಿಷ್ ತಾರೀಖು ಲಾಗಾಯಿತು (ಮೂರು) ತಿಂಗಳುವರೆಗಾಗಿ ತಾಲ್ಲೂಕಿಗೆ ಕ್ರಮವಾಗಿ ಅಪ್ಲಿಕೇಷ್ನ ಕೊಟ್ಟು ಕಾಪಿ ಪಡದುಕೊಳ್ಳಬಹುದು. ಈ ವಾಯಿದೆ ಕಳೆದ ಕೂಡ್ಲೆ ಸದರಿ ರಿಕಾರ್ಡುಗಳೆಲ್ಲವು ನಾಶಪಡಿಸುವದ್ದರಿಂದ ನಂತರ ದಾಖಲೆ ದೊರಿಯಲಾರದು ತಿಳಿಯುವದು.

ಹೆಚ್. ವೆಂಕಟನರಸಯ್ಯ,
ಆಕ್ಟಿಂಗ್ ಅಮಲ್ದಾರ್.

ಮೈಸೂರ ಗೆಜೆಟ್ ಚಂದಾದಾರರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀವೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚೀಫ್ ಮಾಹೇ ಯಾ ಕ್ವಾರ್ಟರಿಗೆ		ದಾವಣಿಪಾಯಿ ಪ್ರಕಾರ ದರಗಳು
		ರೂ. ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ, ರೆಗ್ಯುಲೇರ್ಷ ಯಾ ಆಕ್ಟ್ಯಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮಕ್ರುಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಏನೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿರಬೇಕೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮಕ್ರುಂ 24205—6—ಜಿ. 6200ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವು ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟು 21ನೆ ಮಕ್ರುಂ 2633—41 ಮಿಸ್. 558ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇರ್ಷ ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸುಗಳು:—

	ರೂ. ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ ..	2 8